57

# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ

-- • --

## ವಿಷಯ

ಕೆ.ಐ.ಎ.ಡಿ.ಬಿ ವತಿಯಿಂದ ತುಮಕೂರು ಜಿಲ್ಲೆ, ಶಿರಾ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಸಿವಿಲ್ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಇದರಲ್ಲಿ ತಾಂತ್ರಿಕ ಸಮಿತಿ ಸದಸ್ಯರು ಹಾಗೂ ಗುತ್ತಿಗೆದಾರರು ಶಾಮೀಲಾಗಿ ಕೆ.ಟಿ.ಪಿ.ಪಿ ಕಾಯ್ದೆಯ ಪಾರದರ್ಶಕತೆ ಪಾಲಿಸದೆ, ನಿಯಮಬಾಹಿರವಾಗಿ ಅನರ್ಹರಿಗೆ ಗುತ್ತಿಗೆ ನೀಡಿರುವುದಲ್ಲದೆ, ಅಂದಾಜು ಮೊತ್ತಕ್ಕಿಂತ ದುಪ್ಪಟ್ಟು ಮೊತ್ತಕ್ಕೆ ಟೆಂಡರ್ ಕರೆಯುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡಿರುವ ಗಂಭೀರ ಸಮಸ್ಯೆಯ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

## ಉತ್ತರ

ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ ಸುಮಾರು 815.27 ಎಕರೆ ಪ್ರದೇಶದಲ್ಲಿ ಶಿರಾ 1ನೇ ಹಂತ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸಲಹಾ ಸಂಸ್ಥೆಯಾದ ಮೆ॥ ಆಲ್.ಕಾನ್ ಕನ್ಸಲ್ಟೆಂಟ್ ಇಂಜಿನಿಯರ್ಸ್ ಇಂಡಿಯಾ ಪ್ರೈ.ಲಿ. ಬೆಂಗಳೂರು ಇವರು ರೂ.93.00 ಕೋಟಿಗಳ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಇದರಲ್ಲಿ 35 ಮೀ. ಅಗಲ, 30ಮೀ ಅಗಲ, 24ಮೀ ಅಗಲ ಮತ್ತು 18ಮೀ. ಅಗಲದ ರಸ್ತೆಗಳು, ಆರ್.ಸಿ.ಸಿ. ಬಾಕ್ಸ್ ಕಲ್ವರ್ಟ್ಸ್, ಸ್ಟಾರ್ ಕಲ್ವರ್ಟ್ಸ್, ಮಳೆ ನೀರು ಚರಂಡಿ, ಹೆಚ್.ಡಿ.ಪಿ.ಇ. ಪೈಪ್‌ಲೈನ್, 1.0 ಎಂ.ಎಲ್.ಡಿ ಸಾಮರ್ಥ್ಯದ ಜಿ.ಎಲ್.ಎಸ್.ಆರ್. ಮತ್ತು ಶೇಕಡಾ 12ರಷ್ಟು ಜಿ.ಎಸ್.ಟಿ.ಯು ಒಳಗೊಂಡಿರುತ್ತದೆ.

ಮುಂದುವರೆದು, ಶಿರಾ 1ನೇ ಹಂತ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ ದಿನಾಂಕ: 27.11.2018ರಂದು ನಿಮಾನುಸಾರ ರೂ.93.00 ಕೋಟಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಆಹ್ವಾನಿಸಲಾಗಿದ್ದು, ಬಿಡ್ಡುಗಳನ್ನು ಸಲ್ಲಿಸಲು ದಿನಾಂಕ: 21.01.2019ರಂದು ಕೊನೆಯ ದಿನವಾಗಿದ್ದು, ದಿನಾಂಕ: 31.01.2019 ರಂದು ಸ್ವೀಕೃತವಾದ ಒಟ್ಟು 5 ಮಂದಿ ಬಿಡ್ಡುದಾರರ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗಿರುತ್ತದೆ. ಅದರ ವಿವರ ಈ ಕೆಳಕಂಡಂತಿದೆ:-

1. ಮೆ॥ ಪಿ.ಆರ್.ಎನ್ ಇನ್ಫ್ರಾಟೆಕ್
2. ಮೆ॥ ಅನ್ನಪೂರ್ಣೇಶ್ವರಿ ಕನ್ಸ್ಟ್ರಕ್ಷನ್ಸ್ ಪ್ರೈ.ಲಿ.
3. ಮೆ॥ ಅಮೃತ ಕನ್ಸ್.ಟ್ರಕ್ಷನ್ಸ್ ಪ್ರೈ.ಲಿ
4. ಮೆ॥ ಆರ್.ಎಂ.ಎನ್ ಇನ್ಫ್ರಾಸ್ಟ್ರಕ್ಚರ್ಸ್ ಲಿ.
5. ಮೆ॥ ಲಿಯಾ ಇನ್ಫ್ರಾಟೆಕ್ ಪ್ರೈ.ಲಿ.

ಸದರಿ ತಾಂತ್ರಿಕ ಬಿಡ್ಡಿನಲ್ಲಿ 5 ಮಂದಿ ಬಿಡ್ಡುದಾರರು ಇ-ಪ್ರಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಿರುವ ದಾಖಲೆಗಳನ್ನು ದಿನಾಂಕ: 07.02.2019 ರಂದು ನಡೆದ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯ ಮುಂದೆ ಮಂಡಿಸಲಾಗಿದ್ದು, ಸಮಿತಿಯು ಬಿಡ್ಡುದಾರರು ಅಪ್‌ಲೋಡ್ ಮಾಡಿರುವ ದಾಖಲೆಗಳ ಆಧಾರ ಹಾಗೂ ನಿಯಮದಂತೆ ಪರಿಶೀಲಿಸಿ, ಅಂತಿಮವಾಗಿ 3 ಮಂದಿ ಬಿಡ್ಡುದಾರರಾದ (1) ಮೆ॥ ಪಿ.ಆರ್.ಎನ್ ಇನ್ಫ್ರಾಟೆಕ್ (2) ಮೆ॥ ಅಮೃತ ಕನ್ಸ್ಟ್ರಕ್ಷನ್ಸ್ ಪ್ರೈ.ಲಿ ಮತ್ತು (3) ಮೆ॥ ಲಿಯಾ ಇನ್ಫ್ರಾಟೆಕ್ ಪ್ರೈ.ಲಿ. ಇವರುಗಳ ತಾಂತ್ರಿಕ ಬಿಡ್ಡುಗಳನ್ನು ಅಂಗೀಕರಿಸಿದ್ದು, ದಿನಾಂಕ: 08.02.2019 ರಂದು 3 ಮಂದಿ ಬಿಡ್ಡುದಾರರ ಆರ್ಥಿಕ ಬಿಡ್ಡುಗಳನ್ನು ತೆರೆಯಲಾಗಿರುತ್ತದೆ.

ಸದರಿ ಆರ್ಥಿಕ ಬಿಡ್ಡಿನಂತೆ 3 ಮಂದಿ ಬಿಡ್ಡುದಾರರ ಪೈಕಿ ಅತಿ ಕಡಿಮೆ ದರ ಶೇಕಡಾ 12ರಷ್ಟು ಜಿ.ಎಸ್.ಟಿ ಸೇರಿ ರೂ.96.59 ಕೋಟಿಯನ್ನು ಮೆ॥ ಲಿಯಾ ಇನ್ಫ್ರಾಟೆಕ್ ಪ್ರೈ.ಲಿ.ರವರು ನಮೂದಿಸಿದ್ದು, ಇದು ಟೆಂಡರಿಗಿಟ್ಟ ಮೊತ್ತ ರೂ.92.97 ಕೋಟಿಗಳಿಗಿಂತ ಶೇಕಡಾ 3.90ರಷ್ಟು ಹೆಚ್ಚಿರುತ್ತದೆ.

ಮೆ॥ ಪಿ.ಆರ್.ಎನ್ ಇನ್ಫ್ರಾಟೆಕ್ ರವರು ರೂ.99.44 ಕೋಟಿಗಳನ್ನು ನಮೂದಿಸಿದ್ದು, ಇದು ಟೆಂಡರಿಗಿಟ್ಟ ಮೊತ್ತಕ್ಕಿಂತ ಶೇಕಡಾ 6.96ರಷ್ಟು ಹೆಚ್ಚಿರುತ್ತದೆ.

ಮೆ॥ ಅಮೃತ ಕನ್ಸ್ಟ್ರಕ್ಷನ್ಸ್ ಪ್ರೈ.ಲಿ.ರವರು ರೂ.100.97 ಕೋಟಿಗಳನ್ನು ನಮೂದಿಸಿದ್ದು, ಇದು ಟೆಂಡರಿಗಿಟ್ಟ ಮೊತ್ತಕ್ಕಿಂತ ಶೇಕಡಾ 8.61ರಷ್ಟು ಹೆಚ್ಚಿರುತ್ತದೆ.

ಟೆಂಡರ್ ಮೌಲ್ಯಮಾಪನ ಸಮಿತಿಯ ಶಿಫಾರಸ್ಸಿನಂತೆ ಅತಿ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರನ್ನು ನಮೂದಿಸಿರುವ ದರದಲ್ಲಿ ರಿಯಾಯಿತಿ ನೀಡುವ ಸಲುವಾಗಿ ದಿನಾಂಕ: 23.02.2019 ರಂದು ನಡೆದ ತಾಂತ್ರಿಕ ಸಮಿತಿ ಸಭೆಗೆ ಆಹ್ವಾನಿಸಿದ್ದು, ಸದರಿ ಗುತ್ತಿಗೆದಾರರು ತಾವು ನಮೂದಿಸಿರುವ ದರದಲ್ಲಿ ರಿಯಾಯಿತಿಯನ್ನು ನೀಡಲು ಒಪ್ಪದೇ ಇರುವುದು ಹಾಗೂ ಗುತ್ತಿಗೆದಾರರು ನಮೂದಿಸಿರುವ

ದರಗಳು ಸ್ಪರ್ಧಾತ್ಮಕವಾಗಿರುವುದನ್ನು ಗಮನಿಸಿ ಅದರಂತೆ ಟೆಂಡರ್ ಕಾಮಗಾರಿಯನ್ನು ಮೆ॥ ಆಯಾ ಇನ್ಫ್ರಾಟೆಕ್ ಪ್ರೈ.ಲಿ.ರವರಿಗೆ ಟೆಂಡರಿಗಿಟ್ಟ ಮೊತ್ತವಾದ ರೂ.92.96 ಕೋಟಿಗಳಗಿಂತ ಶೇಕಡಾ 3.90ರಷ್ಟು ಹೆಚ್ಚಿನ ಮೊತ್ತವಾದ ರೂ.96.59 ಕೋಟಿಗಳಿಗೆ (12% ಜಿ.ಎಸ್.ಟಿ ಸಹಿತ) ಕಾಮಗಾರಿಯನ್ನು ವಹಿಸಲು ತೀರ್ಮಾನಿಲಾಗಿದ್ದು, ಅದರಂತೆ ಮುಖ್ಯ ಅಭಿಯಂತರ, ಕೆ.ಐ.ಎ.ಡಿ.ಬಿ. ಇವರು ಗುತ್ತಿಗೆದಾರರಿಗೆ ದಿನಾಂಕ: 02.03.2019ರಂದು ಕಾರ್ಯಾದೇಶವನ್ನು ನೀಡಿರುತ್ತಾರೆ.

ಪ್ರಸ್ತುತ ಕಾಮಗಾರಿಯು ಶೇಕಡಾ 98ರಷ್ಟು ಭೌತಿಕ ಪ್ರಗತಿ ಸಾಧಿಸಿದ್ದು, ಉಳಿದ ಕಾಮಗಾರಿಯನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು.

ಗುತ್ತಿಗೆದಾರರಿಗೆ ಟೆಂಡರ್ ಮುಖಾಂತರ ಅವಾರ್ಡ್ ಮಾಡುವಾಗ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳನ್ನು ಅಂತಿಮಗೊಳಿಸುವಲ್ಲಿ ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಗುತ್ತಿಗೆದಾರರ ತಾಂತ್ರಿಕ ಬಿಡ್ಡುಗಳ ದಾಖಲೆಗಳ ಆಧಾರ ಹಾಗೂ ನಿಯಮದಂತೆ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದ್ದು ಪಾರದರ್ಶಕತೆಯನ್ನು ಪಾಲಿಸಲಾಗಿರುತ್ತದೆ.

ಶಿರಾ 1ನೇ ಹಂತ ಕೈಗಾರಿಕಾ ಬಡಾವಣೆಯ ಅಭಿವೃದ್ಧಿ ಕಾಮಗಾರಿಯ ಗುತ್ತಿಗೆಯನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುವ ದಾಖಲೆಗಳನ್ನು ಆಧಾರ ಹಾಗೂ ನಿಯಮದಂತೆ ಕಾರ್ಯಾದೇಶವನ್ನು ನೀಡಲಾಗಿದೆ. ಸದರಿ ಕಾಮಗಾರಿಯ ಅಂದಾಜು ಮೊತ್ತವು ರೂ.93.00 ಕೋಟಿಗಳಾಗಿದ್ದು, ಟೆಂಡರನ್ನು ಅಷ್ಟೇ ಮೊತ್ತಕ್ಕೆ ಕರೆಯಲಾಗಿದ್ದು, ಕಾಮಗಾರಿಯನ್ನು ಟೆಂಡರಿಗಿಟ್ಟ ಮೊತ್ತಕ್ಕಿಂತ ಶೇಕಡಾ 3.90ರಷ್ಟು ಹೆಚ್ಚಿಗೆ ಅಂದರೆ ರೂ.96.59 ಕೋಟಿಗಳಿಗೆ (12% ಜಿ.ಎಸ್.ಟಿ ಸಹಿತ) ಕೈಗೊಳ್ಳಲು ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಈ ಕಾಮಗಾರಿಯು ಗುಣಮಟ್ಟದಿಂದ ಕೂಡಿರುತ್ತದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.

ಸಂಖ್ಯೆ: ಸಿಐ 176 ಐಎಪಿ (ಇ) 2021

(ಮುರುಗೇಶ್ ಆರ್.ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು